**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ. ಮಂಗಳೂರು,**
**ಕಾರ್ಯನಿರ್ವಹಣೆ ಪುತ್ತೂರು, ದ.ಕ.**

ಎಸ್.ಸಿ.ಸಂ. **5017/2018**

**ಚಾ.ಸಾ.ಃ** 4 **ಪ್ರಾ.ಸಾ.ಃ** 3

ದಿನಾಂಕಃ **25-10-2021** ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಸಾಕ್ಷಿದಾರರ ಹೆಸರುಃ** ಶ್ರೀಮತಿ. ಮಮತ

ಗಂಡನ **ಹೆಸರು** ಃ ರಮೇಶ್ ಪೂಜಾರಿ

**ವಯಸ್ಸು** ಃ 38 ವರ್ಷ

**ಉದ್ಯೋಗ** ಃ ಅಂಗಡಿ ವ್ಯಾಪಾರ

**ವಾಸಸ್ಥಳ** ಃ ಧರ್ಮಸ್ಥಳ

---

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರಕಾರಿ ಅಭಿಯೋಜಕರಿಂದಃ-**

1. ನನಗೆ 1ನೇ ಆರೋಪಿಯ ಪರಿಚಯ ಇದೆ. ನಾನು 1ನೇ ಆರೋಪಿಯ ಮನೆಯಲ್ಲಿ 10 ವರ್ಷಗಳ ಹಿಂದೆ ಮನೆ ಕೆಲಸ ಮತ್ತು ಅಡುಗೆ ಕೆಲಸ ಮಾಡುತ್ತಿದ್ದೆ. ನನಗೆ 2ನೇ ಆರೋಪಿಯ ಪರಿಚಯವಿಲ್ಲ. ನನಗೆ ಚಾ.ಸಾ.5 ರವರ ಪರಿಚಯವಿಲ್ಲ. ನನಗೆ ಚಾ.ಸಾ.1 ಮತ್ತು 3 ರವರ ಪರಿಚಯವಿರುವುದಿಲ್ಲ. 1ನೇ ಆರೋಪಿಯು ಚಿತ್ರರಂಗದಲ್ಲಿ ನಟನಾಗಿರುತ್ತಾನೆ ಎನ್ನುವುದು ಗೊತ್ತಿತ್ತು. ಈಶ್ವರಮಂಗಲದಲ್ಲಿ ಅವರಿಗೆ ಕೃಷಿಯಿರುತ್ತದೆ. ಆ ಕೃಷಿ ನೋಡಿಕೊಳ್ಳಲು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಅವರು ಹೇಳಿಕೊಟ್ಟ ಮೇರೆಗೆ ಸಾಕ್ಷಿ ನುಡಿಯಬೇಕೆಂದು ನನಗೆ ಬೆದರಿಕೆ ಹಾಕಿದ್ದರು. ಈ ಪ್ರಕರಣದಲ್ಲಿ ಠಾಣೆಗೆ ಹೋಗಿರುವುದು ಬಿಟ್ಟು ಬೇರೆಲ್ಲಿಯೂ ನಾನು ಹೋಗಿರಲಿಲ್ಲ. ನನಗೆ ಈಗ ತೋರಿಸಲಾಗುತ್ತಿರುವ ದಾಖಲಾತಿಯಲ್ಲಿರುವ ಸಹಿ ನನ್ನದು ಸಾಕ್ಷಿಗೆ ಪುತ್ತೂರು ನ್ಯಾಯಿಕ ದಂಡಾಧಿಕಾರಿಯವರ ಕಲಂ. 164 (5)

ಅಡಿಯಲ್ಲಿ ದಾಖಲಿಸಿಕೊಂಡಿರುವ ಹೇಳಿಕೆಯನ್ನು ತೋರಿಸಲಾಗಿರುತ್ತದೆ. ಅದನ್ನು ನಿ.ಪಿ. 15 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು 15(ಎ ಯಿಂದ ಜಿ) ಎಂದು ಗುರುತಿಸಲಾಯಿತು. ಆ ಸಹಿಗಳನ್ನು ಎಲ್ಲಿ ಹಾಕಿದ್ದೇನೆ ಎಂದು ಗೊತ್ತಿಲ್ಲ. ನನಗೆ ತೋರಿಸಲಾಗುತ್ತಿರುವ ಸ್ಥಳ ಮಹಜರ್ ನಲ್ಲಿರುವ ಸಹಿ ನನ್ನದ್ದು. ಅದನ್ನು ಎಲ್ಲಿ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ನ್ನು ನಿ.ಪಿ. 16 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 16(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ** ಪ್ರಭಾರ ಸರಕಾರಿ **ಅಭಿಯೋಜಕರಿಂದಃ-**

2. 1ನೇ ಆರೋಪಿಗೆ ಮುಡಾಯೂರು, ಮಂಗಳೂರು, ಬೆಂಗಳೂರುಗಳಲ್ಲಿ ಜಮೀನುಗಳು ಇವೆ ಎಂಬ ವಿಚಾರ ನನಗೆ ಗೊತ್ತು ಎಂದರೆ ಸುಳ್ಳು. ಮುಡಾಯೂರು ನಲ್ಲಿರುವ ಜಮೀನನ್ನು ನೋಡಿಕೊಳ್ಳಲು ಚಾ.ಸಾ.1 ರವರನ್ನು ನೇಮಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಂಗಳೂರಿನಲ್ಲಿರುವ ಜಮೀನನ್ನು ನೋಡಿಕೊಳ್ಳಲು ಚಾ.ಸಾ.5 ರವರನ್ನು ನೇಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2ನೇ ಆರೋಪಿಯು 1ನೇ ಆರೋಪಿಯ ಕಾರು ಚಾಲಕ ಎಂದರೆ ನನಗೆ ಗೊತ್ತಿಲ್ಲ. 2015 ರಲ್ಲಿ 1ನೇ ಆರೋಪಿ ವಿನೋದ್ ಆಳ್ವ ಮತ್ತು ಚಾ.ಸಾ.1 ರವರಿಗೆ ಜಮೀನು ವಿಚಾರದಲ್ಲಿ ತಕಾರಾರು ಆಯ್ತು ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಯು ಚಾ.ಸಾ. 5 ಮತ್ತು ಇನ್ನಿತರ ರೌಡಿಗಳನ್ನು ಮನೆಗೆ ಕರೆಸಿಕೊಂಡು ಸಚ್ಚಿದಾನಂದನನ್ನು ಹಾಗೂ ಚಾ.ಸಾ.3 ಭರತ್ ರವರನ್ನು ಕೊಲೆ ಮಾಡಬೇಕೆಂದು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಚಾ.ಸಾ.1 ರವರನ್ನು ಅವರು ಹಾಲು ತೆಗೆದುಕೊಂಡು ಹೋಗುವ ಸಮಯದಲ್ಲಿ ಅವರನ್ನು ಕೊಲೆ ಮಾಡಿಸುತ್ತೇನೆಂದು 1ನೇ ಆರೋಪಿಯು ನನ್ನ ಬಳಿ ಹೇಳುತ್ತಿದ್ದರು ಎಂದರೆ ಸುಳ್ಳು. ಚಾ.ಸಾ.3 ರವರ ಬುಲೇಟ್ ಶಬ್ದ ಕೇಳಿದಾಗ ನನಗೆ ತಿಳಿಸಬೇಕು, ಅವರನ್ನು ಕೂಡ ಕೊಲೆ ಮಾಡಬೇಕಾಗಿದೆ ಎಂದು 1ನೇ

ಆರೋಪಿಯು ನನ್ನ ಬಳಿ ಹೇಳುತ್ತಿದ್ದರು ಎಂದರೆ ಸುಳ್ಳು. ಚಾ.ಸಾ.5 ರವರು ಈ ರೀತಿ ನಾನು ಕೊಲೆ ಮಾಡುವುದಿಲ್ಲ ಎಂದು 1ನೇ ಆರೋಪಿಯ ಬಳಿ ಜಗಳವಾಡಿದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾ.ಸಾ.5 ರವಿ ಯವರು 1ನೇ ಆರೋಪಿಯ ಮನೆ ಬಿಟ್ಟು ಹೋಗುವಾಗ ಚಾ.ಸಾ.3 ರವರ ಬಳಿ ಈ ಎಲ್ಲಾ ವಿಷಯಗಳನ್ನು ಹೇಳಿ ಹೋಗುತ್ತೇನೆಂದು ನನ್ನಲ್ಲಿ ಹೇಳಿದ್ದರೆಂದರೆ ಸರಿಯಲ್ಲ. ಈ ವಿಷಯವನ್ನು 1ನೇ ಆರೋಪಿಯ ಬಳಿ ನಾನು ಹೇಳಿದಾಗ ಈ ಎಲ್ಲಾ ವಿಷಯಗಳು ಹೊರ ಬರುತ್ತವೆಂದು 1ನೇ ಆರೋಪಿಯು ನನ್ನನ್ನು ಮನೆಯಿಂದ ಹೊರ ಹೋಗಲು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಂತರ ಜೀವ ಭಯದಿಂದ ನಾನು ಆ ಮನೆ ಕೆಲಸ ಬಿಟ್ಟು ನನ್ನ ಮನೆಗೆ ವಾಪಾಸ್ಸು ಬಂದು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಮನೆಯಲ್ಲಿದ್ದೆನು ಎಂದರೆ ಸರಿಯಲ್ಲ. ನಂತರ ಚಾ.ಸಾ.1 ರವರು ಈ ಪ್ರಕರಣವನ್ನು ದಾಖಲಿಸಿದರು. ಈ ಪ್ರಕರಣದಲ್ಲಿ ಈ ಎಲ್ಲಾ ಹೇಳಿಕೆಗಳನ್ನು ಪೊಲೀಸರಿಗೆ ನೀಡಿದೆನು ಎಂದರೆ ಸರಿಯಲ್ಲ. ನಂತರ ತಕ್ಷೀರು ಸ್ಥಳಕ್ಕೆ ಹೋಗಿ ನಿ.ಪಿ. 16 ರಂತೆ ಪೊಲೀಸರಿಗೆ ಸ್ಥಳವನ್ನು ತೋರಿಸಿಕೊಟ್ಟು ಮಹಜರು ಮಾಡುವಾಗ ನಾನು ಹಾಜರಿದ್ದೆನು ಎಂದರೆ ಸರಿಯಲ್ಲ. ನಂತರ 20.11.2015 ರಂದು ನನ್ನನ್ನು ಪುತ್ತೂರು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದರು ಎಂದರೆ ನಿಜ. ಅಲ್ಲಿ ನ್ಯಾಯಾಧೀಶರ ಮುಂದೆ ನನ್ನ ಸ್ವಇಚ್ಛೆಯಿಂದ ಎಲ್ಲಾ ವಿಷಯಗಳ ಬಗ್ಗೆ ಹೇಳಿಕೆಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರ ಹೆದರಿಸಿದರಿಂದ ಹೇಳಿದ್ದೇನೆ ಎನ್ನುತ್ತಾರೆ. ಪೊಲೀಸರು ನನಗೆ ಹೆದರಿಸುತ್ತಿದ್ದರು ಎಂದು ನ್ಯಾಯಾಧೀಶರ ಮುಂದೆ ಹೇಳಲು ನನಗೆ ಧೈರ್ಯ ಬರಲಿಲ್ಲ. ಈಗಲೂ ಕೂಡ ಆರೋಪಿಗಳಿಗೆ ಬೆದರಿಕೆ ಪಟ್ಟು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಓದಿ ಹೇಳಿದಂತೆ ನಂತರ ಅವರ ತೋಟದ ಕೆಲಸಕ್ಕೆ ಬರುವವರನ್ನು---------- ಬಿಟ್ಟು ಬಂದಿರುತ್ತೇನೆ. ನಿ.ಪಿ. 17 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.1 ಮತ್ತು 3

ರವರನ್ನು ಕೊಲೆ ಮಾಡಲು 1ನೇ ಆರೋಪಿಯು 2ನೇ ಆರೋಪಿಯೊಂದಿಗೆ ಸೇರಿಕೊಂಡು ಒಳಸಂಚು ಮಾಡಿದ್ದಾರೆ ಎಂದು ನನಗೆ ಗೊತ್ತಿದ್ದರು ಸಹ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ-

ಇಲ್ಲ.

**(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ ಹೇಳಿ, ಕೇಳಿ ಸರಿ ಇದೆ,**

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು ಕಾರ್ಯನಿರ್ವಹಣೆಃ ಪುತ್ತೂರು, ದ.ಕ.